# ಬೋಧನಾ ಸಾಧನವಾಗಿ ಕಥೆ ಹೇಳುವುದು

IT for Change

CC-BY-SA July 2024

ನಿಮಗೆ ಸದಾ ನೆನಪಾಗುವ ನಿಮ್ಮ ಬಾಲ್ಯದ ಕಥೆ ಯಾವುದು ?

ನಿಮಗೆ ಆ ಕಥೆಯನ್ನು ಯಾರು ಹೇಳಿದರು ಮತ್ತು ಯಾವ ಭಾಷೆಯಲ್ಲಿ ಹೇಳಿದರು ?

## ಕಥೆ ಹೇಳುವುದನ್ನು ತರಗತಿಯಲ್ಲಿ ಏಕೆ ಬಳಸಬೇಕು ?

# ಕಥೆ ಹೇಳುವುದನ್ನು ತರಗತಿಯಲ್ಲಿ ಏಕೆ ಬಳಸಬೇಕು ?


- ಕಥೆಯು ಆಸಕ್ತಿ, ಪ್ರೇರಣೆ ಮತ್ತು ಆನಂದವನ್ನುಂಟು ಮಾಡುತ್ತದೆ.
- ಭಾಷೆಯ ಲಯ, ಸಂಧರ್ಭಕ್ಕೆ ತಕ್ಕಂತೆ ಬಳಸುವ ರೀತಿ ಮತ್ತು ಉಚ್ಚಾರಣೆಯನ್ನು ತಿಳಿಸಿಕೊಡುತ್ತದೆ.
- ಭಾಷೆ ಮತ್ತು ಭಾಷಾ ಕಲಿಕೆಯ ಬಗ್ಗೆ ಸಕಾರಾತ್ಮಕ ಮನೋಭಾವಗಳನ್ನು ಬೆಳೆಸಲು ಸಹಾಯ ಮಾಡುತ್ತದೆ.
- ಕಥೆಗಳು ಕಲ್ಪನೆಗಳನ್ನು ವೃದ್ಧಿಸುತ್ತದೆ.
- ಮಗುವಿನ ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುತ್ತದೆ.
- ಮಗುವಿಗೆ ತನ್ನ ದೈನಂದಿನ ಜೀವನವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.
- ತರಗತಿಯಲ್ಲಿ ಕಥೆಗಳನ್ನು ಆಲಿಸುವುದರಿಂದ ಸಾಮಾಜಿಕ ಅನುಭವಗಳನ್ನು ಹಂಚಿಕೊಳ್ಳಬಹುದು.
- ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.
- ಹೊಸ ಭಾಷೆಯ ಅಂಶಗಳನ್ನು ಪರಿಚಯಿಸುತ್ತದೆ ಮತ್ತು ಅಸ್ಥಿತ್ವದಲ್ಲಿರುವ ಇತರೆ ಅಂಶಗಳನ್ನು ಸಧೃಡಗೊಳಿಸುತ್ತದೆ.

# ಭಾಷಾ ಬೋಧನೆಯ ಉದ್ದೇಶಗಳು

- ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಬೆಳೆಸುವುದು.
- ಸಾಹಿತ್ಯಾಭಿರುಚಿ ಮೂಡಿಸುವುದು.
- ಆನಂದಕ್ಕಾಗಿ ಮಕ್ಕಳು ಸ್ವತಂತ್ರವಾಗಿ ಓದಲು ಸಮರ್ಥವಾಗುವಂತೆ ಮಾಡುವುದು.
- ಮಗುವಿನ ಕಲ್ಪನಾ ಶಕ್ತಿಯನ್ನು ವೃದ್ಧಿಸುವುದು.
- ಜೀವನ ಮೌಲ್ಯಗಳನ್ನು ರೂಪಿಸುವುದು.
- ರಸಭಾವಗಳ ಆಸ್ವಾದನೆ ಉಂಟುಮಾಡುವುದು.
- ಪರಿಣಾಮಕಾರಿ ಸಂವಹನ ಮಾಡುವ ಸಾಮರ್ಥ್ಯವನ್ನ ಬೆಳೆಸವುದು.
- ಸೃಜನಾತ್ಮಕ ಶಕ್ತಿಯನ್ನು ಬೆಳೆಸುವುದು.

## ಹಸಿದ ಕಂಬಳಿ ಹುಳು

ಚಿಟ್ಟೆಯೊಂದು ಎಲೆಯ ಮೇಲೆ ಮೊಟ್ಟೆಯಿಟ್ಟಿತ್ತು. ಆ ಮೊಟ್ಟೆ ಒಡೆದು ಅದರಿಂದ ಸಣ್ಣ ಹುಳವೊಂದು ಹೊರಬಂತು. ಆ ಹುಳಕ್ಕೆ ಸಿಕ್ಕಾಪಟ್ಟೆ ಹೊಟ್ಟೆ ಹಸಿವಾದ್ದರಿಂದ ಊಟವನ್ನು ಹುಡುಕಿ ಒಂದು ವಾರದ ವರೆಗೂ ಹಣ್ಣು, ತರಕಾರಿ, ಮಾಂಸ, ಡೈರಿ ಉತ್ಪನ್ನಗಳು, ಸಿಹಿತಿನಿಸು ಮತ್ತು ಕೇಕ್ ಗಳನ್ನು ಚನ್ನಾಗಿ ತಿಂದಿತು. ಹೆಚ್ಚಾಗಿ ತಿಂದು ಹೊಟ್ಟೆ ನೋವು ಬಂದು ಮಾರನೆಯ ದಿನ ಬರೀ ಎಲೆಗಳನ್ನು ಸೇವಿಸಿದ್ದರಿಂದ ಅದಕ್ಕೆ ಸ್ವಲ್ಪ ಆರಾಮೆನಿಸಿತು. ನಂತರ ದಪ್ಪನೆ ದಡೂತಿಯಾಗಿ ಬೆಳೆದು ಗೂಡು ಕಟ್ಟುವ ಸಮಯಕ್ಕೆ ಹತ್ತಿರವಾಗಿತ್ತು. ಎರಡು ವಾರಗಳ ನಂತರ ಅದು ಆ ಗೂಡಿನಿಂದ ಒಂದು ಸಣ್ಣ ರಂಧ್ರವನ್ನು ಮಾಡಿ ಹೊರಬಂತು. ಈಗ ಅದು ಆಕರ್ಷಣೀಯವಾದ ಸುಂದರವಾದ ಚಿಟ್ಟೆಯಾಗಿತ್ತು.



# ಹಸಿದ ಕಂಬಳಿ ಹುಳು

**ವಿಜ್ಞಾನ**
ಚಿಟ್ಟೆಯ ಜೀವನ ಚಕ್ರ
(ಲೇಬಲ್ ಮಾಡುವುದು
ಒಂದು ರೇಖಾಚಿತ್ರ)

**ಭಾಷೆ**
ಆಹಾರ ಶಬ್ದಕೋಶ
ಮಿಂಚುಪಟ್ಟಿ ಆಟಗಳು;
ಆಹಾರಗಳನ್ನು ವರ್ಗೀಕರಿಸುವುದು
ಆರೋಗ್ಯಕರ ಆಹಾರ ಎಂದರೇನು ?
ಆಹಾರ ದಿನಚರಿ ಬರೆಯುವುದು

**ಭೂಗೋಳ ಶಾಸ್ತ್ರ**
ಪ್ರಪಂಚದ ಚಿಟ್ಟೆಗಳು,
ಚಿಟ್ಟೆಯ ಬಣ್ಣಗಳನ್ನು ಹಚ್ಚಿ
ಖಂಡಗಳನ್ನು ಗುರ್ತಿಸುವುದು.

**ಗಣಿತ**
ಪ್ರಮಾಣ ಬಗ್ಗೆ ಕೇಳುವುದು
ಒಟ್ಟು ಹಣ್ಣುಗಳ ಸಂಖ್ಯೆ ವರ್ಕ್ ಶೀಟ್
ಲೆಕ್ಕಾಚಾರ ಮಾಡಲು ತಿಳಿಸುವುದು.

**ವಿಜ್ಞಾನ ಮತ್ತು ಗಣಿತ**
ಇಷ್ಟ/ಇಷ್ಟವಿಲ್ಲದ ಆಹಾರ ವರ್ಗ ಸಮೀಕ್ಷೆ
ಫಲಿತಾಂಶಗಳನ್ನು ಒಟ್ಟುಗೂಡಿಸಲು ಬಾರ್ ಗ್ರಾಫ್

**ಕಲಿಕೆಯಿಂದ ಕಲಿಕಾ ವಿಮರ್ಶೆಯೆಡೆಗೆ**
ಕಥೆಯನ್ನು ವಿಮರ್ಶಿಸುವ ಆಟವನ್ನು ಆಡುವುದು
(ಓದುವಿಕೆ ಮತ್ತು ಪ್ರಶ್ನೆಗಳಿಗೆ ಉತ್ತರಿಸುವುದು)

**ಪರಿಕಲ್ಪನೆಯ ಬಲವರ್ಧನೆ**
ಸಮಯದ ಬಗ್ಗೆ ಯೋಚಿಸುವುದು.
ಹಸಿದ ಕಂಬಳಿಹುಳುವಿನ ಒಂದು ತಿಂಗಳ ಜೀವನವನ್ನು
ರೆಕಾರ್ಡ್ ಮಾಡಲು ಚಾರ್ಟ್ ಬಳಸುವುದು.

**ಕಲೆ ಮತ್ತು ವಿನ್ಯಾಸ:**
ಮೊಟ್ಟೆ ಪೆಟ್ಟಿಗೆ,
ಕಂಬಳಿಹುಳು, ಕಾಗದದ ಚಿಟ್ಟೆ ಮಾಡುವುದು.

ಕಥೆಯಲ್ಲಿ ನೋಡಬೇಕಾದ ವೈಶಿಷ್ಟ್ಯಗಳು - ಮಾದರಿಯನ್ನು ಅನ್ವೇಷಿಸೋಣ
ಕಥೆ ಹೇಳುವ ಸಂಪನ್ಮೂಲ..

https://storyweaver.org.in